## 3 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ,

## ಬೆಂಗಳೂರು ನಗರ.

## ಸಿಸಿ. 5722-2008

**ಚಾಸಾ-14 ಪ್ರಾಸಾ-5**

| | |
|---|---|
| **ಸಾಕ್ಷಿದಾರರ ಹೆಸರು** | **ಲತಾ** |
| **ಗಂಡನ ಹೆಸರು** | **ವೆಂಕಟೇಶ** |
| **ವಯಸ್ಸು** | **60 ವರ್ಷ** |
| **ಉದ್ಯೋಗ** | **ನಿವೃತ್ತ ಪಿ.ಎಸ್.ಐ** |
| **ವಾಸ** | **ಮಲ್ಲತಹಳ್ಳಿ, ಬೆಂಗಳೂರು** |
| **ಪ್ರಮಾಣೀಕರಿಸಿದ ದಿನಾಂಕ** | **26/09/2023** |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

ನಾನು 2006 ರಿಂದ 2008 ರವರೆಗೆ ಎಸ್.ಆರ್. ನಗರ ಪೊಲೀಸ್ ಠಾಣೆಯಲ್ಲಿ ಮಹಿಳಾ ಪೊಲೀಸ್ ಮುಖ್ಯ ಪೇದೆಯಾಗಿ ಆಗಿ ಕರ್ತವ್ಯ ಸಲ್ಲಿಸಿದ್ದೇನೆ. ದಿನಾಂಕ 22/04/2006 ರಂದು ಎಂದಿನಂತೆ ನಾನು ಎಸ್.ಆರ್. ನಗರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ನಮ್ಮ ಠಾಣಾ ಪಿ.ಐ ರವರು ನನ್ನನ್ನು ಕರೆದು ಎಸ್.ಜೆ.ಪಾರ್ಕ ಪೊಲೀಸ್ ಠಾಣೆಯ ಮೊ.ಸಂ. 52/2006 ರಲ್ಲಿ ಕರ್ತವ್ಯಕ್ಕೆ ನೇಮಿಸಿದ್ದರು. ಅದರಂತೆ ನಾನು ಎಸ್.ಜೆ. ಪಾರ್ಕ ಪೊಲೀಸ್ ಠಾಣೆಯ ಪಿ.ಐ ರವರ ಬಳಿ ಕರ್ತವ್ಯಕ್ಕೆ ನೇಮಕಗೊಂಡಿದ್ದು. ಸದರಿ ಪಿ.ಐ. ರವರು ಈ ಪ್ರಕರಣದಲ್ಲಿ ಮಹಿಳಾ ಆರೋಪಿ ಸಾಧನಾ ಕೋಂ. ಜಗನ್ನಾಥ ರವರ ಪತ್ತೆಗಾಗಿ ಪಿ.ಸಿ. 9638 ರವರ ಜೊತೆ ನೇಮಿಸಿದರು. ನಾನು ಮತ್ತು ನಾಗರಾಜ ಪಿ.ಸಿ. 9638 ಪತ್ತೆ ಕಾರ್ಯಕ್ಕೆ ಹೋಗಿರುತ್ತೇವೆ. ಟೌನಹಾಲ್ ಹತ್ತಿರ ಗಸ್ತು ಮಾಡುತ್ತಿರುವಾಗ ನಮಗೆ ಮಾಹಿತಿ ಬಂದ ಪ್ರಕಾರ ಒಬ್ಬ ಮಹಿಳೆಯನ್ನು

ವಿಚಾರಿಸಿದಾಗ ಅವಳು ಆರೋಪಿಯಾಗಿದ್ದರಿಂದ ಅವಳನ್ನು ನಾನು ದಸ್ತಗಿರಿ ಮಾಡಿಕೊಂಡು ಪಿ.ಐ. ರವರ ಮುಂದೆ ಹಾಜರು ಪಡಿಸಿ ವರದಿ ನೀಡಿರುತ್ತೇನೆ. ಸದರಿ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಗೈರು ಹಾಜರಾಗಿದ್ದು, ಅವರ ಪರ ವಕೀಲರು ಗುರುತಿಗೆ ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

**ಪಾಟೀ ಸವಾಲು : ಶ್ರೀ. ಸಿ.ಎನ್.ಡಿ. ಆರೋಪಿ ಪರ ವಕೀಲರಿಂದ ::**

2. ಆರೋಪಿ ಪತ್ತೆಗೆ ಮೊದಲು ಅವರ ಭಾವಚಿತ್ರ ತೋರಿಸಿರಲಿಲ್ಲ, ಚಹರೆ ಹೇಳಿರಲಿಲ್ಲ. ಆ ದಿನ ನಾನು ಯಾವುದೇ ಕರ್ತವ್ಯ ಮಾಡಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು.)

**ಓ.ಹೇ.ಕೇ.ಸ.ಇದೆ**

**3 ನೇ ಎ.ಸಿ.ಎಮ್.ಎಮ್.ನ್ಯಾ.**

**ಬೆಂಗಳೂರು.**